ಚಲನಚಿತ್ರಗಳಿಗೆ ಅನುದಾನ

1039 (1419) ಶ್ರೀ ಸಂಪಂಗಿ, ಎನ್. (ಬಾಗೇಪಲ್ಲಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಲನಚಿತ್ರಗಳಿಗೆ ಸರ್ಕಾರದಿಂದ ನೀಡುವ ಅನುದಾನದ ಮೊತ್ತವೆಷ್ಟು? ಯಾವ ಚಲನಚಿತ್ರಗಳಿಗೆ ಹಣ ನೀಡಲಾಗಿದೆ. (ವಿವರ ನೀಡುವುದು)

ಆ) ಈಗಿನ ಚಿತ್ರಗಳಲ್ಲಿ ಅಶ್ಲೀಲವಾದ ಸಂಭಾಷಣೆ ಹಾಗೂ ದೃಶ್ಯಗಳು ತೋರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಅದನ್ನು ತಡೆಗಟ್ಟಲು ಸರ್ಕಾರವವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು):

ಅ0 ಒಂದು ವರ್ಷದಲ್ಲಿ ಗುಣಾತ್ಮಕ ಚಲನಚಿತ್ರ ಆಯ್ಕೆ ಸಮಿತಿಯು ಆಯ್ಕೆ ಮಾಡುವ ಗರಿಷ್ಟ 20 ಚಲನಚಿತ್ರಗಳಿಗೆ ತಲಾ ರೂ.10-00 ಲಕ್ಷಗಳ ಸಹಾಯಧನವನ್ನು ಪಾವತಿಸಲಾಗುವುದು. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಇಲ್ಲ

ಇ) ಪ್ರಶ್ನೆ ಉದ್ಭವಿಸುವುದಿಲ್ಲ

ಅನುಬಂಧ

ಸಹಾಯಧನ ನೀಡಲಾಗಿರುವ ಚಿತ್ರಗಳ ವಿವರಗಳು

2002-03ನೇ ಸಾಲಿನ ಅನುದಾನದಲ್ಲಿ 98-99ನೇ ಸಾಲಿನ ಕೆಳಕಂಡ 20 ಚಿತ್ರದಗಳಿಗೆ ಬಾಕಿ ಇದ್ದ ಸಹಾಯಧನ ಪ್ರತಿ ಚಿತ್ರಗಳಿಗೆ ತಲಾ 5 ಲಕ್ಷ ರೂ.ಗಳನ್ನು ಹಾಗೂ 99-2000ನೇ ಸಾಲಿನ ಈ ಕೆಳಕಂಡ ಚಿತ್ರಗಳಿಗೆ ಭಾಗಶ: ಸಹಾಯಧನ ರೂ.5-00 ಲಕ್ಷಗಳನ್ನು ಪಾವತಿಸಲಾಗಿದೆ.

1998-99ನೇ ಸಾಲಿನ ಚಿತ್ರಗಳು

1. ನೋಡು ಬಾ ನಮ್ಮೂರ 2. ವಿಮೋಚನೆ 3. ಜೋಡಿ ಹಕ್ಕಿ 4. ಅಂತರ್ಗಾಮಿ 5. ಭೂಮಿಗೀತೆ 6. ಮೇಘ ಬಂತು ಮೇಘ 7. ಅಗ್ನಿ ಸಾಕ್ಷಿ 8. ನಿಶ್ಯಬ್ದ 10. ವಜ್ರ, 11. ವೀರಪ್ಪನಾಯಕ 12. ಹೃದಯಾಂದಲಿ 13. ಟುವ್ವಿ ಟುವ್ವಿ, 14. ಪ್ರತಿಭಟನೆ 15. ನೀ ಮುದಿದಾ ಮಲ್ಲಿಗೆ 16. ದೋಣಿ ಸಾಗಲಿ 17. ಅಂಡಮಾನ್ 18. ಭೂಮಿ ತಾಯಿಯ ಚೊಚ್ಚಲ ಮಗ 19. ಶ್ರೀ ಸಿದ್ದಾರೂಢ ಮಹಾತ್ಮೆ 20. ಆಡಿ ಬಾ ಅರಗಿಣಿಯೇ

1999-2000ನೇ ಸಾಲಿನ 20 ಚಿತ್ರಗಳಾದ

1. ದೇವೀರಿ 2. ಕಾನೂರು ಹೆಗ್ಗಡತಿ 3. ಚಂದ್ರಮುಖಿ ಪ್ರಾಣಸಖಿ 4. ಹೂಮಳೆ 5. ಶಬ್ದವೇದಿ 6. ಹೃದಯ-ಹೃದಯ 7. ನಂಬರ್-1 8. ಚೈತ್ರದ ಚಿಗುರು 9. ಆರ್ಯಭಟ 10. ಪ್ರೇಮ ಪ್ರೇಮ ಪ್ರೇಮ 11. ವರ್ಷಋತು 12. ಕನಸಲು ನೀನೆ ಮನಸಲು ನೀನೆ 13. ಬಣ್ಣದ ಹೆಜ್ಜೆ 14. ಜನುಮದಾತ 15. ಅರುಣೋದಯ 16. ನನ್ನಾಸೆಯ ಹೂವೆ 17. ಜೀವನರಾಗ 18. ಗಾಜಿನ ಮನೆ 19. ಮನಸ್ಸು 20. ಒಂತ ಅಡ್ಜೆಸ್ಟ್ ಮಲ್ಟೆ - ಚಿತ್ರಗಳಿಗೆ ತಲಾ ರೂ.5-00 ಲಕ್ಷಗಳ ಭಾಗಶ: ಸಹಾಯಧನವನ್ನು ಪಾವತಿಸಲಾಗಿದೆ.